Besides, a copy of the rewritten Record of Rights is maintained in the Tahsil Office as per Rule 71(3) of the Mysore Land Revenue Rules, 1966 and if the reginal record is manipulated, it would be passible to set right the manipulation with reference to the duplicate kept in the Tahsil Office.

ಶ್ರೀ ಮಲ್ಲಿಕಾರ್ಜುನ :— ಸ್ವಾಮಿ ತಾವು ಉತ್ತರ ಕೊಟ್ಟ ಪ್ರಕಾರ ಇದು ಸರಿ ಇದ್ದರೂ ಕೂಡ ವಿಲೇಜ್ ಅಕೌಂಟೆಂಟರುಗಳು ಭೂ ಸುಧಾರಣ ಕಾಯಿದೆಯನ್ನು ತಂದು ಭೂ ಮಿತಿಯನ್ನು ವಿಧಿಸುತ್ತಾರೆ ಎಂದು ತಿಳಿದು ೫ ವರ್ಷದ ಪಹಣಿಯನ್ನು ತಮಗೆ ಬೇಕಾದವರಿಗೆ, ಬೇಕಾದ ಹಾಗೆ ಬದಲಾವಣೆ ಮಾಡಿ ಎಂಟ್ರಿ ಮಾಡುತ್ತಿದ್ದಾರೆ. ಆದ್ದರಿದ ಎಲ್ಲಾ ರೆವಿನ್ಯೂ ರೆಕಾರ್ಡುಗಳನ್ನೂ ಮ್ಯುಟೇಷನ್ ರಿಜಿಸ್ಟರನ್ನೂ ಸರ್ಕಾರದವರು ತೆಗೆದುಕೊಂಡು ಸೀಲ್ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ :— ಈಗಾಗಲೇ ನಾನು ಅದಕ್ಕೆ ನೇರವಾಗಿ ಉತ್ತರ ಕೊಟ್ಟಿದ್ದೇನೆ. ಆ ರೀತಿ ವಿಲೇಜ್ ಅಕೌಂಟೆಂಟರುಗಳು ಮಾಡಿರತಕ್ಕಂಥಾ ನಿರ್ದಿಷ್ಟವಾದ ಕೇಸುಗಳನ್ನು ಸರ್ಕಾರದ ಗಮನಕ್ಕೆ ತಂದರೆ ಆ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ. ಪೂರ್ಣವಾಗಿ ಎಲ್ಲರ ಪಹಣಿ ರೆಕಾರ್ಡುಗಳನ್ನೂ ಸರ್ಕಾರದ ವಶಕ್ಕೆ ತೆಗೆದುಕೊಂಡರೆ ಆಗಾಗ್ಗೆ ಪಹಣಿಯನ್ನು ಬರೆಯುವುದಕ್ಕೆ ಅವಕಾಶ ವಿಲ್ಲದೆ ಅದು ನಿಂತುಹೋಗುತ್ತದೆ. ಆದ್ದರಿಂದ ಆ ರೀತಿ ವಿಲೇಜ್ ಅಕೌಂಟೆಂಟಿರುಗಳು ಪಹಣಿಯನ್ನು ಬದಲಾವಣೆ ಮಾಡಿದ ನಿರ್ದಿಷ್ಟವಾದ ಕೇಸುಗಳನ್ನು ಸರ್ಕಾರದ ಗಮನಕ್ಕೆ ತಂದರೆ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ :— ಈಗ ರೆಕಾರ್ಡ್ಸ್ ಆಫ್ ರೈಟ್ಸ್ ವಗೈರೆ ಫಲು ಪತ್ರಿಕೆಗಳನ್ನು ಬರೆಯುವುದಕ್ಕೆ ಹೊಸ ಫಾರಂ ಅನ್ನು ತಾತ್ಕಾಲಿಕವಾಗಿ ತುದಿನ್ನೀರಿ. ಈಗ ಭೂ ಸುಧಾರಣಾ ಕಾನೂನು ಬರುತ್ತದೆ ಎಂದು ಸಾಕಾದಷ್ಟು ಜಮೀನುಗಳನ್ನು ಅನೇಕರು ಪರಭಾರೆ ಮಾಡುತ್ತಿದ್ದಾರೆ. ಆದರೆ ಜೊತೆಗೆ ಪಹಣಿಯನ್ನು ಬೇರೆ ಬದಲಾವಣೆ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಇದನ್ನು ಸರಿಪಡಿಸುವುದಕ್ಕೆ ಸರ್ಕಾರದವರು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :— ಈಗ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಈ ಬಗ್ಗೆ ತಹಶೀಲ್ದಾರರಿಗೆ ಅಪೀಲ್ ಮಾಡಿ ಅವರು ತೀರ್ಮಾನ ಮಾಡಿದ ಮೇಲೆ ಅದು ಡೆಪ್ಯುಟಿ ಕಮಿಷನರಿಗೆ ಅಪೀಲು ಬಂದ ಸಂದರ್ಭದಲ್ಲಿ ಅವರು ನೇರವಾಗಿ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ. ಜಮೀನು ವರ್ಗಾವಣೆಗೆ ಅಡಚಣೆಯಾಗುವಂತೆ ಎಲ್ಲಾದರೂ ಗ್ರಾಮ ಲೆಕ್ಕಾಧಿಕಾರಿಗಳು ಅಕ್ರಮವಾಗಿ ಪಹಣಿಯನ್ನು ಬದಲಾಯಿಸುವ ದೂರು ಬಂದರೆ ಆ ಬಗ್ಗೆ ತೀವ್ರವಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ.

[ARREST AND RELEASE OF MEMBERS - ANNOUNCEMENT]

MADAM SPEAKER :— I have received a message from the Governor recommending the consideration of the Mysore Land Reforms (Amendment) Bill, 1972 by the Mysore Legislative Assembly. The message runs thus :—

> "In pursuance of clause (3) of article 207 of the Constitution of India, I, Mohanlal Sukhadia, Governor of Mysore, do hereby recommend that the Mysore Land Reforms (Amendment) Bill, 1972, be considered by the Mysore Legislative Assembly."

(sd.).....,

Governor Mysore.,

MADAM SPEAKER :—

I have received a letter from the Superintendent of Police, Bangalore District, regarding the arrest of Hon. Member Sri Konandur Lignappa under Sections 143, 147, 148, 149 and 447 of I.P.C. read with Section 24 (d) and (g) of Forest Act. It has also been stated that a case has been registered against Sri Konandur Lingappa and others and that the arrested persons have refused to offer bail. They are being produced before the Judicial Magistrate to-day.

STATEMENT OF THE MINISTER FOR ANIMAL HUSBANDRY

Re : Strike by the veterinary College Students

ಶ್ರೀ ಎಚ್. ಡಿ ದೇವೆಗೌಡ (ಹೊಳೆನರಸಿಪುರ) :—ನಾನು ಮೊನ್ನೆ ಈ ವೆಟರಿನರಿ ಕಾಲೇಜು ಹುಡುಗರು ತಮ್ಮ ವೇತನ ಹೆಚ್ಚಳವನ್ನು ಪಕ್ಕದ ರಾಜ್ಯಗಳಲ್ಲಿರುವ ಮಟ್ಟಕ್ಕೆ ಏರಿಸಬೇಕೆಂಬುದರ ಬಗ್ಗೆ ಸತ್ಯಾಗ್ರಹ ಮಾಡುತ್ತಿರುವುದರಿಂದ ಸರ್ಕಾರದ ಗಮನವನ್ನು ಸೆಳೆಯುವುದಕ್ಕೋಸ್ಕರ ಒಂದು ನೋಟೀಸನ್ನು ಕಳಿಸಿದ್ದೆ. ಬಹುಶಃ ಅದು ಮಾನ್ಯ ಮಂತ್ರಿಯವರಿಗೆ ಬಂದಿರಬಹುದೆಂದು ಕಾಣತ್ತದೆ. ಏಕೆಂದರೆ ಇವತ್ತು ಬೇರೆ ರಾಜ್ಯಗಳಲ್ಲಿ ಕೊಡುತ್ತಿರುವಂತೆ ಇಲ್ಲಿನ ವೆಟರಿನರಿ ಡಾಕ್ಟರುಗಳಿಗೆ ಸಂಬಳ ಸಾರಿಗೆಗಳನ್ನು ಕೊಡುವುದಕ್ಕೆ ಸರ್ಕಾರಕ್ಕೆ ಏನು ಆಡ್ಡಿ ಆಂತಕಗಳು ಇವೆ ಎಂಬುದು ನನಗೆ ಗೊತ್ತಾಗಲಿಲ್ಲ. ಇವರು ಬರೇ ದನಗಳ ಡಾಕ್ಟ್ರಗಳು ಎಂದು ಹೇಳಿ ಮನುಷ್ಯರ ಡಾಕ್ಟ್ರಗಳಿಂದ ಪ್ರತ್ಯೇಕ ಮಾಡಿ ಅಷ್ಟು ಲಘುವಾದ ಭಾವನೆಯನ್ನು ಇಟ್ಟುಕೊಂಡಿದ್ದಾರೆಯೇ ಏನು? ಏಕೆಂದರೆ ಅವರು ಈ ಬೇಡಿಕೆಗೋಸ್ಕರ ಸತ್ಯಾಗ್ರಹವನ್ನು ಮುಂದುವರಿಸುವುದು ಬೇಡ. ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಯವರು ಏನಾದರೂ ಒಂದು ಭರವಸೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

3-00 PM

† ಶ್ರೀ ಎನ್. ಚಿಕ್ಕೇಗೌಡ (ಪಶುಸಂಗೋಪನ ರಾಜ್ಯ ಮಂತ್ರಿಯವರು) ಮಾನ್ಯ ಅಧ್ಯಕ್ಷರೆ, ಇದೆ ವಿಷಯದಲ್ಲಿ ವಿಟರಿನರಿ ಕಾಲೇಜು ವಿದ್ಯಾರ್ಥಿಗಳು ನನಗೆ ಸಹ ಒಂದು ಮೆಮೊರ್ಯಾಂಡಂ ನ್ನು ಕೊಟ್ಟಿದ್ದರು. ಅದೇ ರೀತಿ ಮೇಲ್ಮನೆಯಲ್ಲಿ ಇದೇ ವಿಚಾರ ಕಾಲಿಂಗ್ ಅಟೆನ್ಷನ್ ರೂಪದಲ್ಲಿ ಬಂದಾಗ ಅದರ ಬಗ್ಗೆ ವಿವರವಾದ ಹೇಳಿಕೆಯನ್ನು ಕೊಟ್ಟಿದ್ದೇನೆ. ಮತ್ತು ಈ ಮನೆಯಲ್ಲಿಯೂ ಸಹ ನಮ್ಮ ಖಾತೆಯ ಬೇಡಿಕೆಗಳು ಬಂದಾಗ ಅದಕ್ಕೆ ಉತ್ತರ ಕೊಡುವಾಗ ಇದರ ಬಗ್ಗೆ ವಿವರವಾದ ಹೇಳಿಕೆಯನ್ನು ಕೊಟ್ಟಿದ್ದೇನೆ. ಈಗ ಮಾನ್ಯ ವಿರೋಧ ಪಕ್ಷದ ಸದಸ್ಯರು ಅದನ್ನು ಪ್ರಸ್ತಾಪ ಎತ್ತಿದ್ದಾರೆ. ಸತ್ಯಾಗ್ರಹ ಮಾಡತಕ್ಕದ್ದು ಪ್ರಜಾ ಪ್ರಭುತ್ವದಲ್ಲಿ ಒಳ್ಳೆಯ ವಿಚಾರವಾದರೂ ಸಹ ಈ ಸಂದಿಗ್ಧ ಕಾಲದಲ್ಲಿ ಸತ್ಯಾಗ್ರಹ ಮತ್ತು ಉಪವಾಸ ಮಾಡತಕ್ಕದ್ದು ಸರಿಯಲ್ಲವೆಂದು ಈ ಸಭೆಯಲ್ಲಿ ಹೇಳಬಯಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಂಕರು ಪಶುವೈದ್ಯರುಗಳನ್ನು ಮನುಷ್ಯರ ವೈದ್ಯರಿಗಿಂತ ಕೀಳು ಮಟ್ಟದಲ್ಲಿ ನೋಡಬೇಕೆಂಬ ಭಾವನೆ ಇದೆಯೇ ಎಂದು ಕೇಳಿದರು. ನಾನಾದರೂ ಹೇಳುತ್ತೇನೆ, ನನಗಾಗಲಿ ಅಥವಾ ಸರ್ಕಾರಕ್ಕಾಗಲಿ ಒಬ್ಬರನ್ನು ಮೇಲು ಮತ್ತು ಇನ್ನೊಬ್ಬರನ್ನು ಕೀಳು ಎಂಬ ಭಾವನೆಯಿಂದ ನೋಡಬೇಕೆಂಬ ಉದ್ದೇಶ ಇಲ್ಲ. ಆದರೆ ಬೇರೆ ರಾಜ್ಯಗಳಲ್ಲಿ ಏನೊಂದು ವೇತನಗೆಳನ್ನು ಕೊಡುತ್ತಿದ್ದಾರೆ ಅದನ್ನೇ ಇಲ್ಲಿ ಕೊಡಲು ಕಷ್ಟ ಎಂದು ಮಾತ್ರ ಹೇಳುತ್ತಿದ್ದೇನೆ ಈಗಾಗಲೇ ೬ನೇ ಹಣಕಾಸಿನ ಆಯೋಗದವರು ಕೆಲಸವನ್ನು ಪ್ರಾರಂಭ ಮಾಡುತ್ತಿದ್ದಾರೆ. ಅದರ ಮುಂದೆಯು ಅನೇಕ ವಿಚಾರಗಳು ಬರುತ್ತವೆ. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಈ ಕೆಟಗರಿಯಲ್ಲಿರತಕ್ಕಂಥವರು ೫೩೬ ಜನರಿದ್ದಾರೆ. ಇವತ್ತು ಅವರಿಗೆಲ್ಲರಿಗೂ ಇರತಕ್ಕಂತಹ ೨೫೫-೫೦೦ ಸ್ಕೇಲನ್ನು ಹೆಚ್ಚಿಸಿ ಬೇರೆ ರಾಜ್ಯಗಳಂತೆ ೪೦೦ ರಿಂದ ೯೦೦ ಸ್ಕೇಲನ್ನು ಕೊಡುವುದಕ್ಕೆ ಹೋದರೆ ಸುಮಾರು ೭೦ ಲಕ್ಷದ ಮೇಲೆ ಸಾವಿರ ಚಿಲ್ಲರೆ ರೂಪಾಯಿ ಸರ್ಕಾರಕ್ಕೆ ಖರ್ಚು ಬೀಳುತ್ತದೆ ಬರೇ ಡಾಕ್ಟ್ರುಗಳಿಗೆ ಇದನ್ನು ಕೊಟ್ಟರೆ ೫ ಲಕ್ಷ ಚಿಲ್ಲರೆ ರೂಪಾಯಿ ಒಂದು ವರ್ಷಕ್ಕೆ ಕೊಡಬೇಕಾಗುತ್ತದೆ. ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಅಂಕಿ ಅಂಶಗಳನ್ನು ತರಿಸಿದ್ದೇನೆ. ಇದನ್ನು ಕೊಟ್ಟರೆ ಬೇರೆ